ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 21-12-1978.

# *ಪ್ರತೀಕಲ್ಪದ ಅತಿಸಮೀಪ ಆತ್ಮರ ರೂಪ, ರೇಖೆ ಮತ್ತು ವೇಳೆ*

(हर कल्प की अति समीप आत्माओं का रूप, रेखा और वेला)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ಪ್ರೇಮ ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸರ್ವರ ಭಾಗ್ಯ ವಿಧಾತ, ಎಲ್ಲವನ್ನೂ ತಿಳಿದಿರುವ ಶಿವಬಾಬಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾ ಅಮೃತವೇಳೆಯಲ್ಲಿ ಮಕ್ಕಳ ಜೊತೆಯಲ್ಲಿ ಮಧುರ ಮಿಲನವನ್ನು ಮಾಡುತ್ತಾ. ನಾಲ್ಕೂ ಕಡೆಯಿಂದ ಬಂದಿರುವ ಮಕ್ಕಳನ್ನು ನೋಡುತ್ತಾ ಪರಸ್ಪರ ಒಂದು ವಿಶೇಷ ಅಂಶದ ಬಗ್ಗೆ ಆತ್ಮಿಕ ಸಂಭಾಷಣೆ ಮಾಡುತ್ತಾ ಇದ್ದರು. ಯಾವುದರ ಬಗ್ಗೆ? ಮಕ್ಕಳಲ್ಲಿ ಪ್ರತಿಯೊಬ್ಬರ ದಿವ್ಯ ಜನ್ಮದ ರೂಪ, ವೇಳೆ ಹಾಗೂ ರೂಪ - ರೇಖೆಗಳ ಆಧಾರದ ಮೇಲೆ ವರ್ತಮಾನ ಸಂಗಮಯುಗದ ಜೀವನ ಹಾಗೂ ಭವಿಷ್ಯ ಜೀವನವು ಅವಲಂಬಿಸಿದೆ. ರೂಪದಲ್ಲಿ ಏನು ನೋಡಿದೆವು? ಜನ್ಮ ತೆಗೆದುಕೊಳ್ಳುತ್ತಲೇ ಶಕ್ತಿರೂಪದ ಹೊಳಪು ಇತ್ತೋ ಅಥವಾ ವಿಯೋಗದೊಂದಿಗೆ ಯೋಗದ ರೇಖೆ ಇತ್ತೋ ಎಂದರೆ ಚಡಪಡಿಸುವಿಕೆ. ಅಥವಾ ಬಾಯಾರಿಕೆಯ ರೂಪ ಇತ್ತೋ, ಪ್ರೇಮದ ರೂಪ ಇತ್ತೋ ಅಥವಾ ಸೇವಾಧಾರೀ ಸ್ವರೂಪ ಇತ್ತೋ ಅಥವಾ ಬರುತ್ತಲೇ ಅತೀಂದ್ರಿಯ ಸುಖದಲ್ಲಿ ಸುಖದ ರೂಪ ಇತ್ತೋ ಎನುವುದನ್ನು ನೋಡುತ್ತಾ ಇದ್ದೆವು. ಅದರ ಜೊತೆಗೆ ರೇಖೆಗಳು ಯಾವುವು ಇದ್ದವು, ಬರುತ್ತಲೇ ಸಂಪೂರ್ಣ ಪತಂಗ ಆಗುವ ರೇಖೆ ಇತ್ತೋ ಅಥವಾ ಪುರುಷಾರ್ಥಿಯ ರೇಖೆ ಇತ್ತೋ, ವರದಾನಿಯ ರೇಖೆ ಇತ್ತೋ, ಧೈರ್ಯ ಹಾಗೂ ಉಲ್ಲಾಸದ ರೇಖೆ ಇತ್ತೋ ಅಥವಾ ಜನ್ಮ ತೆಗೆದುಕೊಳ್ಳುತ್ತಲೇ ಸಹಯೋಗದ ಆಧಾರದಮೇಲೆ ನಡೆಯುವ ರೇಖೆ ಇತ್ತೋ ಎನ್ನುವುದನ್ನು ನೋಡುತ್ತಿದ್ದೆವು. ಹಾಗೆಯೇ ಜನ್ಮದ ವೇಳೆಯನ್ನೂ ಸಹ ನೋಡುತ್ತಾ ಇದ್ದೆವು. ಒಂದು ಸೆಕೆಂಡ್‌ನಲ್ಲಿ ನಿಶ್ಚಯ ಬುದ್ಧಿಯವರಾದಿರೋ, ಏಳು ದಿನಗಳ ಕೋರ್ಸ್ ನ ನಂತರ ನಿಶ್ಚಯಬುದ್ಧಿಯವರಾದಿರೋ ಅಥವಾ ಇನ್ನೂ ಅಧಿಕ ಸಮಯದ ನಂತರ ನಿಶ್ಚಯಬುದ್ಧಿಯವರಾದಿರೋ ಅಥವಾ ಸಂಶಯ ಹಾಗೂ ನಿಶ್ಚಯದ ಯುದ್ಧವು ನಡೆಯುತ್ತಾ ನಡೆಯುತ್ತಾ ನಿಶ್ಚಯಬುದ್ಧಿಯವರಾದಿರೋ ಅಥವಾ ಈಗಲೂ ಯುದ್ಧದಲ್ಲಿಯೇ ತೊಡಗಿದ್ದೀರೋ ಎನ್ನುವುದನ್ನು ನೋಡುತ್ತಾ ಇದ್ದರು. ಒಂದು

ಸೆಕೆಂಡ್‌ನಲ್ಲಿ ನಿಶ್ಚಯ ಎಂದರೆ ದೃಷ್ಟಿಯಿಂದ ಸಂತುಷ್ಟರಾಗುವುದು. ಎರಡನೆಯ ವರ್ಗದವರು ಶ್ರೇಷ್ಠ ನುಡಿಯಿಂದ ಸಂತುಷ್ಟರಾದವರು, ಮೂರನೆಯ ವರ್ಗದವರು ವ್ಯಾಪಾರಿಯೊಂದಿಗೆ ವ್ಯಾಪಾರ ಮಾಡುವಂತೆ ಬೆಲೆಯನ್ನು ಪದೇ ಪದೇ ತಿಳಿದುಕೊಂಡನಂತರ ಮರುಜೀವಾ ಆದವರು. ನಾಲ್ಕನೆಯ ವರ್ಗದವರು ಅಲ್ಪಸ್ವಲ್ಪ ಪ್ರಾಪ್ತಿಯ, ಸ್ನೇಹದ, ಸಂಪರ್ಕದ, ಪರಿವರ್ತನೆಯ ಆಧಾರದಿಂದ ಈಗತಾನೇ ಸಂಶಯ ಮತ್ತು ಈಗಲೇ ನಿಶ್ಚಯದಲ್ಲಿರುವವರು. ಹೀಗೆ ಬಾಪ್‌ದಾದಾ ಇಂದು ಮಕ್ಕಳಲ್ಲಿ ಪ್ರತಿಯೊಬ್ಬರ ಬಗ್ಗೆ ಈ ಅಂಶಗಳನ್ನು ನೋಡುತ್ತಾ ಆತ್ಮಿಕ ಸಂಭಾಷಣೆ ಮಾಡುತ್ತಾ ಇದ್ದರು. 1.ಈ ಮರುಜೀವ ಜೀವನದ ಸದಾ ನಿರ್ವಿಘ್ನ ಅಥವಾ ಸದಾ ತೀವ್ರಪುರುಷಾರ್ಥಿಯಾಗಿರುವವರು. 2.ಸದಾ ಪ್ರಾಪ್ತಿಯ ಮೂಲಕ ಅನುಭವಿಮೂರ್ತಿಯಾಗುವ ಪುರುಷಾರ್ಥಿ ಜೀವನ. 3.ವೃದ್ಧಿ ಕಲೆ ಹಾಗೂ ಕ್ಷೀಣಿಸುವ ಕಲೆ(ಏರುವ ಹಾಗು ಇಳಿಯುವ) ವೇಗದಲ್ಲಿ ನಡೆಯುವ ಜೀವನ ಈ ಮೂರೂ ಪ್ರಕಾರದ ಜೀವನದ ಆಧಾರವು ರೂಪ, ರೇಖೆ ಹಾಗೂ ವೇಳೆಯನ್ನು ಅವಲಂಬಿಸಿದೆ.

ಯಾರು ಪ್ರತಿ ಕಲ್ಪದ ಅತಿ ಸಮೀಪ ಆತ್ಮರು ಅಥವಾ ಪದಮಾಪದಮ್ ಭಾಗ್ಯಶಾಲಿ ಆತ್ಮರಾಗಿದ್ದೀರೋ ಅವರ ರೂಪ, ರೇಖೆ, ವೇಳೆಯು ಏನಾಗಿರುತ್ತದೆ ಎಂಬುದು ಗೊತ್ತಿದೆಯೇ. ಅಂತಹ ಆತ್ಮರು ಒಂದು ಸೆಕೆಂಡ್‌ನಲ್ಲಿ ಬಂದು ತಲುಪಿದರು ಹಾಗೂ ತಂದೆಯ ಮಕ್ಕಳಾದರು. ಕಲ್ಪದ ಹಿಂದಿನ ಭಾಗ್ಯದ ಸ್ಪರ್ಶಜ್ಞಾನ (ಟಚಿಂಗ್) ದ ಆಧಾರದಿಂದ ಜನ್ಮ ತೆಗೆದುಕೊಳ್ಳುತ್ತಲೇ ಬ್ರಾಹ್ಮಣರಾಗಬೇಕಾಗಿಲ್ಲ, ಬ್ರಾಹ್ಮಣರಾಗಿದ್ದೆವು, ಹಿಂದೆಯೂ ಆಗಿದ್ದೆವು ಹಾಗೂ ಈಗಲೂ ಆಗಿಯೇ ಇದ್ದೇವೆ ಎನ್ನುವ ಅನುಭವವನ್ನು ಮಾಡುವರು. ಒಂದು ಸೆಕೆಂಡ್‌ನಲ್ಲಿ ತಮ್ಮತನವು ಅನುಭವ ಆಗುವುದು. ನೋಡಿದರು ಹಾಗೂ ತಿಳಿದುಕೊಂಡರು. ಅಂತಹ ವೇಳೆಯಲ್ಲಿ ಜನ್ಮ ಪಡೆದವರ ರೂಪ ರೇಖೆಯು ಏನಾಗಿರುತ್ತದೆ? ಮೊದಲನೆಯ ವೇಳೆಯವರು ಈಗತಾನೇ ವರ್ಣನೆಮಾಡಲ್ಪಟ್ಟರು. ಅವರ ರೂಪವು ಏನಾಗಿರುವುದು? ಜನ್ಮ ತೆಗೆದುಕೊಳ್ಳುತ್ತಲೇ ಕೇಲವ ರೂಪ, ಶಕ್ತಿ ಅಥವಾ ಶಾಂತಿಯ ಸುಖದ ಅಧಿಕಾರಿ ಅಷ್ಟೇ ಅಲ್ಲ ಜನ್ಮ ತೆಗೆದುಕೊಳ್ಳುತ್ತಲೇ ಸರ್ವ ಆಸ್ತಿಗೆ(ವಾರಸತ್ವ) ಅಧಿಕಾರಿಯಾಗಿಬಿಡುತ್ತಾರೆ. ಹೀಗೆ ಪ್ರತಿಯೊಂದು ಸ್ವರೂಪದ ಅನುಭೂತಿಯ ಅಧಿಕಾರವನ್ನು ಅನುಭವ ಮಾಡುವರು. ಹೇಗೆ ಬೀಜದಲ್ಲಿ ಇಡೀ ವೃಕ್ಷದ ಸಾರವು ತುಂಬಿದೆಯೋ ಹಾಗೆಯೇ ಪ್ರಥಮ ವರ್ಗ ಎಂದರೆ ತಂದೆಯ ಸಮಾನ ಸಮೀಪ ಆತ್ಮರು ಅಥವಾ ಪ್ರಥಮ ವೇಳೆಯ ಆತ್ಮರು ಬರುತ್ತಲೇ ಸರ್ವಸ್ವರೂಪದ ಪ್ರಾಪ್ತಿಯ ಖಜಾನೆಯ ಅನುಭವಿ ಆಗುವರು. ಇದೇ ನಿಜಸ್ವರೂಪ ಆಗಿದೆ ಎನ್ನುವ ಅನುಭವವನ್ನು ಮಾಡುತ್ತಾರೆ. ಸುಖದ ಅನುಭವ ಆಗುತ್ತದೆ. ಶಾಂತಿಯ ಅನುಭವ ಆಗುವುದಿಲ್ಲ, ಶಾಂತಿಯ ಅನುಭವ ಆಗುತ್ತದೆ ಸುಖದ ಅನುಭವ ಆಗುವುದಿಲ್ಲ ಅಥವಾ ಶಕ್ತಿಯ ಅನುಭವ ಆಗುವುದಿಲ್ಲ ಎಂದು ಹೇಳುವುದು ಮೊದಲನೆಯ ವೇಳೆಯ ಆತ್ಮರ ಅನುಭವ ಅಲ್ಲ. ಒಂದು ಸೆಕೆಂಡ್‌ನಲ್ಲಿ ಆಸ್ತಿಗೆ ಅಧಿಕಾರಿ... ಇದೇ ವೇಳೆ ಹಾಗೂ ಸ್ವರೂಪ. ಮತ್ತೆ ರೇಖೆಯು ಏನಾಗಿರುವುದು? ನಿಶ್ಚಯ ಬುದ್ಧಿಯವರಾಗಬೇಕು ಅಥವಾ ನಿಶ್ಚಯ ಮಾಡಬೇಕು ಎನ್ನುವುದು ಸಂಕಲ್ಪ ಮಾತ್ರ ಇರುವುದಿಲ್ಲ. ಜನ್ಮ ತೆಗೆದುಕೊಳ್ಳುತ್ತಲೇ ಸ್ವಾಭಾವಿಕ ನಿಶ್ಚಯ ಬುದ್ದಿಯ ರೇಖೆಯು ಇರುವುದು. ಹೇಗೆ ಅಥವಾ ಹೀಗೆ ಎನ್ನುವುದರ ವಿಸ್ತಾರದಲ್ಲಿ ಹೋಗುವುದಿಲ್ಲ. ಹೀಗೆ ಅಥವಾ ಹೇಗೆ ಎನ್ನುವ ಪ್ರಶ್ನೆಯು ಏಳುವುದಿಲ್ಲ. ಇಂತಹ ಪೂರ್ತಿ ಜೀವನದ ಕಡಿದು ಹೋಗದ ನಿಶ್ಚಯದ ರೇಖೆಯು ಅನ್ಯ ಆತ್ಮರಿಗೂ ಸಹ ಸ್ಪಷ್ಟವಾಗಿ ಕಂಡುಬರುವುದು. ನಿಶ್ಚಯದ ರೇಖೆಯ ಗೆರೆಯು ಅಖಂಡ ಆಗಿರುವುದು. ಮಧ್ಯೆ ಮಧ್ಯೆ ಕಡಿದುಹೋಗುವುದಿಲ್ಲ. ಅಂತಹ ರೇಖೆ ಉಳ್ಳವರ ಮಸ್ತಕದಲ್ಲಿ ಎಂದರೆ ಸ್ಮೃತಿಯಲಿ ಸದಾ ವಿಜಯದ ತಿಲಕವು ಗೋಚರವಾಗುವುದು. ಇಂತಹ ರೇಖೆಯುಳ್ಳ ಬ್ರಾಹ್ಮಣರ ಭವಿಷ್ಯವು ಹೇಗಿರುವುದೆಂದರೆ ಶ್ರೀಕೃಷ್ಣನ ರೂಪದಲ್ಲಿ ಜನ್ಮ ತೆಗೆದುಕೊಂಡ ಕೂಡಲೇ ಕಿರೀಟಧಾರಿ ಆಗಿರುವ ಹಾಗೆ ತೋರಿಸಿರುವಂತೆ ಜನ್ಮ ತೆಗೆದುಕೊಳ್ಳುತ್ತಲೇ ಸೇವೆಯ ಜವಾಬ್ದಾರಿಯ ಕಿರೀಟಧಾರಿ ಆಗಿರುವರು. ಸದಾ ಜ್ಞಾನರತ್ನಗಳೊಂದಿಗೆ ಆಟ ಆಡುವವರಾಗಿರುತ್ತಾರೆ. ಸದಾ ನೆನಪು ಹಾಗೂ ಅನಂದದ ಉಯ್ಯಾಲೆಯಲ್ಲಿ ಉಯ್ಯಾಲೆ ಆಡುತ್ತಾ ಜೀವನವನ್ನು ಕಳೆಯುವವರಾಗಿರುತ್ತಾರೆ. ಸದಾ ಪ್ರತಿಯೊಂದು ಕರ್ಮದಲ್ಲಿ ವರದಾನದ ಹಸ್ತವು ತಮ್ಮ ಮೇಲೆ ಇರುವಂತೆ ಅನುಭವ ಮಾಡುತ್ತಾರೆ. ಪ್ರತಿಯೊಂದು ದಿನಚರಿಯಲ್ಲಿ ತಮ್ಮ ಜೊತೆಯಲ್ಲಿ ಸರ್ವ ಸಂಬಂಧಗಳಿಂದ ಸಮೀಪ ಹಾಗೂ ಸಾಕಾರ ರೂಪದಲಿ ಜೊತೆಯ ಅನುಭವವನ್ನು ಮಾಡುತ್ತಾರೆ. ಸ್ವತಃ ಯೋಗಿ ಹಾಗೂ ಸಹಜಯೋಗಿ ಆಗಿರುತ್ತಾರೆ. ಇದು

ಮೊದಲನೆಯ ವರ್ಗದವರ ರೂಪ, ರೇಖೆ ಹಾಗೂ ವೇಳೆಯ ಕುರುಹು(ಗುರುತು) ಆಗಿದೆ. ಈಗ ನಿಮ್ಮನ್ನು ನೀವೇ ಕೇಳಿಕೊಳ್ಳಿರಿ. ಮೊದಲನೆಯ ವರ್ಗದ ರೂಪ, ರೇಖೆ ಹಾಗೂ ವೇಳೆಯವರು ಎಷ್ಟು ಇರಬಹುದು? ಎಂಟು8 ಅಥವಾ ನೂರೆಂಟು108. ನೀವೆಲ್ಲರೂ ಎಲ್ಲಿರುವಿರಿ? ಈಗ ಬೇಕಾದರೂ ಬದಲಾವಣೆ ಮಾಡಿಕೊಳ್ಳಬಹುದು. ಅಂತ್ಯದಲ್ಲಿ ಬಂದು ತೀವ್ರವಾಗಿ ಮುಂದೆ ಹೋಗಬಹುದು. ಈಗಲೂ ಸಹ ಪರಿವರ್ತನೆಗೆ ಅವಕಾಶ ಇದೆ. ಇನ್ನೂ ವೇಳೆ ಮೀರಿದೆ ಎನ್ನುವ ಬೋರ್ಡ್ ಹಾಕಿಲ್ಲ. ಗುಪ್ತ ಪುರುಷಾರ್ಥಿಯು ಹಗಲೂ ರಾತ್ರಿ ಒಂದೇ ದೃಢ ಸಂಕಲ್ಪದಿಂದ ಹೈಜಂಪ್ ಮಾಡಬಹುದು. ಆದ್ದರಿಂದ ಇನ್ನಾದರೂ ನಿಮ್ಮ ಭಾಗ್ಯವನ್ನು ಮೊದಲನೆಯ ವರ್ಗವನ್ನಾಗಿ ಮಾಡಿಕೊಳ್ಳುವ ಪುರುಷಾರ್ಥದ ಲಾಟರಿಯನ್ನು ಹಾಕಿರಿ. ಆಗ ನಿಮ್ಮ ವರ್ಗವು ಮೊದಲನೆಯದಾಗಿಬಿಡುವುದು. ಏನು ಮಾಡಬೇಕು ಎನ್ನುವುದು ಗೊತ್ತಾಯಿತೇ. ಇದು ಕೊನೆಯ ಅವಕಾಶ ಆಗಿದೆ. ಆದ್ದರಿಂದ ನಡೆದ್ದು ನಡೆದುಹೋಯಿತು ಎಂದು ಅದನ್ನು ಮರೆತುಬಿಡಿ, ಭವಿಷ್ಯವನ್ನು ಶ್ರೇಷ್ಠಮಾಡಿಕೊಳ್ಳಿರಿ. ಇದಕ್ಕಾಗಿ ಬಾಪ್‌ದಾದಾ ಈಗಲೂ ಎಲ್ಲರಿಗೂ ಅವಕಾಶವನ್ನು ಕೊಡುತ್ತಿದ್ದಾರೆ. ನಾವು ಮಾಡಬಹುದಾಗಿತ್ತು ಮಾಡಲಿಲ್ಲ ಎಂದು ಆಮೇಲೆ ದೂಷಣೆ ಮಾಡಬಾರದು. ಸಮಯವು ದೊರೆಯಲಿಲ್ಲ, ಪರಿಸ್ಥಿತಿಗಳು ಕೂಡಿಬರಲಿಲ್ಲ ಎಂದು ಹೇಳಿಕೊಳ್ಳಬಾರದು. ಈಗಲೂ ಸಹ ದಯಾಸಾಗರ ತಂದೆಯ ದಯೆಯ ಹಸ್ತವು ಎಲ್ಲರಮೇಲೆ ಇದೆ. ಆದ್ದರಿಂದ ನಿಮ್ಮ ಮೇಲೆಯೂ ದಯಾದೃದಯರಾಗಿರಿ. ಒಳ್ಳೆಯದು,

**ಇಂತಹ ಸದಾ ತಂದೆಯ ವರದಾನಗಳ ಹಸ್ತವನ್ನು ತಮ್ಮ ಮೇಲೆ ಹಾಗೂ ಸರ್ವರಮೇಲೆ ದಯಾದೃದಯ, ಅಳಿದುಹೋಗದ ಅಖಂಡ ನಿಶ್ಚಯ ಬುದ್ಧಿ, ಅಖಂಡ ಯೋಗಿ, ಸದಾ ವಿಜಯದ ತಿಲಕಧಾರಿ, ಜನ್ಮ ತೆಗೆದುಕೊಳ್ಳುತ್ತಲೇ ಕಿರೀಟಧಾರಿ ಇಂತಹ ಸದಾ ಸಿಂಹಾಸನಾಧಿಕಾರಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ತಂಡಗಳೊಂದಿಗೆ:

(1) ನಿಜಧಾಮ ಹಾಗೂ ನಿಜಸ್ವರೂಪದ ಸ್ಥಿತಿಯಿಂದ ಉಪರಾಮ ಸ್ಥಿತಿ ನಿಮ್ಮ ನಿಜಸ್ವರೂಪ ಹಾಗೂ ನಿಜಧಾಮ ಸ್ಥಿತಿಯು ಸದಾ ನೆನಪಿರುತ್ತದೆಯೇ, ನಿರಾಕಾರ ಪ್ರಪಂಚ ಹಾಗೂ ರೂಪ ಎರಡರ ಸ್ಮೃತಿಯೂ ಈ ಹಳೆಯ ಪ್ರಪಂಚದಲ್ಲಿ ಇರುತ್ತಿದ್ದರೂ ಸಹ ಸದಾ ಅತೀತ ಹಾಗೂ ಪ್ರೀತಿಪಾತ್ರರನ್ನಾಗಿ ಮಾಡಿ ಬಿಡುತ್ತದೆ. ಈ ಪ್ರಪಂಚದವರಲ್ಲವೇ ಅಲ್ಲ, ನಿರಾಕಾರ ಪ್ರಪಂಚದ ನಿವಾಸಿ ಆಗಿಯೇ ಇದ್ದೇವೆ. ಇಲ್ಲಿ ಸೇವೆಗೋಸ್ಕರ ಅವತರಣೆ ಹೊಂದಿದ್ದೇವೆ ಎಂದು ತಿಳಿಯಿರಿ. ಹೀಗೆ ಯಾರು ಅವತರಿತರಾಗುತ್ತಾರೋ ಅವರಿಗೆ ಏನು ನೆನಪಿರುತ್ತದೆ? ಯಾವ ಕಾರ್ಯದ ಸಲುವಾಗಿ ಅವತಾರ ತೆಗೆದುಕೊಳ್ಳುತ್ತಾರೋ ಅದೇ ಕಾರ್ಯವು ನೆನಪಿರುತ್ತದೆ ಅಲ್ಲವೇ. ಅವತಾರವು ಅವತರಿತ ಆಗುವುದೇ ಧರ್ಮದ ಸ್ಥಾಪನೆಯ ಸಲುವಾಗಿ. ಆದ್ದರಿಂದ ನೀವೆಲ್ಲರೂ ಸಹ ಅವತರಿತ ಎಂದರೆ ಅವತಾರ ಆಗಿದ್ದೀರಿ. ಆದ್ದರಿಂದ ಏನು ನೆನಪಿರುತ್ತದೆ? ಇದೇ ಧರ್ಮ ಸ್ಥಾಪನೆ ಮಾಡುವ ಕಾರ್ಯ. ಸ್ವಯಂ ಧರ್ಮಾತ್ಮ ಆಗಿ ಧರ್ಮ ಸ್ಥಾಪನೆ ಮಾಡುವ ಕಾರ್ಯದಲ್ಲಿ ಸದಾ ತತ್ಪರರಾಗಿರುವರು. ಶಕ್ತಿಯ ಅವತಾರ ಆಗಿದ್ದೀರಲ್ಲವೇ. ಪ್ರತಿಯೊಬ್ಬರು ಶಕ್ತಿಯ ಅವತಾರ ಆಗಿದ್ದೀರಿ. ಪಾಂಡವರೂ ಸದಾ ಶಕ್ತಿರೂಪ ಆಗಿದ್ದೀರಿ. ಸರ್ವಶಕ್ತಿವಂತನು ಒಬ್ಬನೇ ಉಳಿದವರೆಲ್ಲರೂ ಶಕ್ತಿಯರು. ಆದ್ದರಿಂದ ನೀವೆಲ್ಲರೂ ಶಕ್ತಿಯ ಅವತಾರ.

ಇಷ್ಟು ಮಾತ್ರವೇ ನೆನಪಿದ್ದರೂ ಸಾಕು ಎಷ್ಟು ಮಧುರವಾದ ಜೀವನದ ಅನುಭವ ಮಾಡುವಿರಿ. ನಾವು ಈ ಮೃತ್ಯುಲೋಕದವರಲ್ಲ, ಅವತಾರ ಆಗಿದ್ದೇವೆ ಎನ್ನುವ ಈ ಸಣ್ಣ ಮಾತು ನೆನಪಿದ್ದರೂ ಸಾಕು ಅತೀತರಾಗಿಬಿಡುವಿರಿ. ಒಂದುವೇಳೆ ನಿಮ್ಮನ್ನು ಅವತಾರ ಎಂದು ತಿಳಿದುಕೊಳ್ಳದೆ ಗೃಹಸ್ಥರು ಎಂದು ತಿಳಿದುಕೊಂಡರೆ ಗೃಹಸ್ಥರ ಗಾಡಿಯು ಕೆಸರಿನಲ್ಲಿ ಹೂತುಹೋಗಿರುತ್ತದೆ. ಗೃಹಸ್ಥರು ಹೊರೆಯನ್ನು ಹೊತ್ತು ಕೊಂಡಿರುವ ಸ್ಥಿತಿಯುಳ್ಳವರು ಹಾಗೂ ಅವತಾರ ಆಗಿರುವವರು ಸಂಪೂರ್ಣ ಹಗುರ ಆಗಿರುವವರು. ಗೃಹಸ್ಥರು ಸಮಸ್ಯೆ ಪರಿಸ್ಥಿತಿಗಳಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ ಹಾಗೂ ಅವತಾರ ಹೊಂದಿರುವವರು ಪೂರ್ತಿ

ಅತೀತ ಆಗಿರುತ್ತಾರೆ. ಒಮ್ಮೊಮ್ಮೆ ಅವತಾರದ ಸ್ಥಿತಿ ಒಮ್ಮೊಮ್ಮೆ ಗೃಹಸ್ಥರ ಸ್ಥಿತಿಯ ಚಕ್ರದಲ್ಲಿ ನೀವು ಒಂದುವೇಳೆ ಸುತ್ತುತ್ತಾ ಇದ್ದರೆ ಸಂಗಮಯುಗದ ಶ್ರೇಷ್ಠ ಜೀವನದ, ಸುಂದರವಾದ ಸುಖ ಜೀವನದ ಅನುಭವವು ಒಮ್ಮೊಮ್ಮೆ ಮಾತ್ರ ಆಗುವುದು. ಸದಾ ಅನುಭವ ಆಗುವುದಿಲ್ಲ. ಸಂಗಮಯುಗದ ಒಂದೊಂದು ದಿನವೂ ಅತಿಪ್ರಿಯಾವಾದುದು. ಆದ್ದರಿಂದ ಇಂತಹ ಪ್ರಿಯವಾದ ದಿನದ ಮನೋಹರ ಸಮಯವನ್ನು ಹೇಗೆ ವ್ಯತೀತ ಮಾಡುತ್ತೀರಿ? 5000 ವರ್ಷಗಳ ಶ್ರೇಷ್ಠ ಪ್ರಾರಬ್ಧದ ಆಧಾರವು ಈ ಕೆಲವೇ ಘಳಿಗೆಗಳಾಗಿವೆ. ಆದ್ದರಿಂದ ಇಂತಹ ಅಮೂಲ್ಯ ಘಳಿಗೆಗಳನ್ನು ಅಮೂಲ್ಯ ರೀತಿಯಲ್ಲಿ ಉಪಯೋಗಿಸಬೇಕಲ್ಲವೇ. ರತ್ನವನ್ನೂ ಒಂದುವೇಳೆ ಕಲ್ಲಿನ ಸಮಾನ ಉಪಯೋಗಿಸಿದರೆ ಪರಿಣಾಮ ಏನಾಗುವುದು? ಸಾಧಾರಣ ರೀತಿಯಲ್ಲಿ ಉಪಯೋಗಿಸಿದರೆ ರತ್ನದ ಬೆಲೆಯನ್ನು ಕಲ್ಲಿನ ಸಮಾನ ಮಾಡಿದಂತಾಗುತ್ತದೆ. ಹಾಗೆಯೇ ಸಮಯವನ್ನು ವ್ಯರ್ಥವಾಗಿ ಕಳೆದರೆ ರತ್ನವನ್ನು ಕಲ್ಲಿನ ಸಮಾನ ಬಳಸಿದಂತಾಗುತ್ತದೆ. ಸಮಯದ ಮೌಲ್ಯವನ್ನು ಅರಿತುಕೊಂಡು ವಿನಿಯೋಗಿಸಿದರೆ ನಿಮ್ಮ ಮೌಲ್ಯವನ್ನು ಕಾಪಾಡಿ ಕೊಂಡಂತೆ ಆಗುತ್ತದೆ. ಸಮಯದ ಅರಿವಂತೂ ನಿಮಗೆ ಇದ್ದೇ ಇದೆ. ಆದರೆ ಅರಿವಿನ ಸ್ವರೂಪ ಆಗಿ ನಡೆದುಕೊಳ್ಳುವುದೇ ಗಮನ ಇಡುವುದಾಗಿದೆ. ಈ ಸಂಗಮಯುಗದ ಒಂದು ಸೆಕೆಂಡೂ ಸಹ ಏನುತಾನೇ ಮಾಡಲಾರದು. ಒಂದು ಸೆಕೆಂಡ್‌ನಲ್ಲಿ ನಾಲ್ಕೂ ಧಾಮದ ಅನುಭವ ಮಾಡಿಕೊಂಡು ಬರಬಲ್ಲಿರಿ. ಅಂತಹ ಅನುಭವಿ ಆಗಿದ್ದೀರಾ?

ಸಣ್ಣ ಸಣ್ಣ ವಿಷಯಗಳಲ್ಲಿ ಸಮಯವು ಕಳೆದುಹೋಗುವುದಿಲ್ಲ. ತಾನೇ. ಈಗ ಊರ್ಧ್ವಲಂಘನ(ಎತ್ತರದ ಜಿಗಿತ, ಹೈ ಜಂಪ್) ಮಾಡಿರಿ. ನಿಧಾನವಾಗಿ ನಡೆಯುವ ಸಮಯವು ಸಮಾಪ್ತಿ ಆಗಿಬಿಟ್ಟದೆ. ಬಾಲ್ಯವು ಬೆಡಗು ಬಿಂಕಗಳಿಂದ ನಡೆಯುವ ಸಮಯ ಆಗಿರುತ್ತದೆ. ಬಾಲ್ಯದಲ್ಲಿ ಬೆಡಗು ಬಿಂಕಗಳು ಶೋಭಿಸುತ್ತವೆ. ಆದರೆ ದೊಡ್ಡವರಾದ ಮೇಲೆ ಬೆಡಗು ಬಿಂಕಗಳಿಂದ ನಡೆದರೆ ಶೋಭಿಸುವುದಿಲ್ಲ. ಬಾಲ್ಯವು ಕಳೆದು ಹೋಗಿ ಈಗ ವಾನಪ್ರಸ್ಥದಲ್ಲಿ ಕೇವಲ ತಂದೆಯ ನೆನಪು ಹಾಗೂ ಸೇವೆಯನ್ನು ಮಾಡುವ ಒಂದೇ ಕಾರ್ಯವು ಉಳಿದು ಬಿಡುತ್ತದೆ. ಅದರ ಹೊರತು ಬೇರೆ ಯಾವ ನೆನಪೂ ಬರಬಾರದು. ಎದ್ದರೂ ನೆನಪು ಹಾಗೂ ಸೇವೆ, ನಿದ್ರೆ ಹೋಗುವಾಗಲೂ ನೆನಪು ಹಾಗೂ ಸೇವೆಯ ಜೊತೆಯಲ್ಲಿದ್ದರೆ ಆಗ ವಾನಪ್ರಸ್ಥ ಅವಸ್ಥೆ ಎಂದು ಕರೆಯಲಾಗುತ್ತದೆ. ಇಲ್ಲಿಯವರೆಗೂ ಒಂದುವೇಳೆ ಬಾಲ್ಯದ ಅಭ್ಯಾಸಗಳೇ ಅಥವಾ ಬಾಲ್ಯದ ಸಂಸ್ಕಾರಗಳೇ ಉಳಿದುಬಿಟ್ಟಿದ್ದರೆ ಅವುಗಳನ್ನು ಕೊನೆಮಾಡಿಬಿಡಿ. ಬಂಧನ ಇದೆ ಏನು ಮಾಡೋಣ, ಹೇಗೆ ಮಾಡಲಿ ಎನ್ನುವುದೆಲ್ಲವೂ ಬಾಲ್ಯದ ಬಿಂಕದ ನೆಪಗಳಾಗಿವೆ. ಈಗ ಆ ದಿನಗಳು ಸಮಾಪ್ತಿ ಆಗಿಬಿಟ್ಟಿವೆ, ಏನು ಮಾಡೋಣ ಎಂದು ಹೇಳುವ ನೀವು ತ್ರಿಕಾಲದರ್ಶಿ ಆಗಿ ನಿಮ್ಮನ್ನು ಅರಿತುಕೊಳ್ಳಲಾರಿರಾ? ಈಗ ಇದರಲ್ಲಿ ಸಮಯವನ್ನು ಕಳೆಯಬಾರದು. ಆಗಬೇಕಾದುದೇನೋ ಸರಿ, ಆಗುವುದಿಲ್ಲ ನನಗೆ ಇಷ್ಟವಿದ್ದರೂ ಮಾಡಲಾರೆನು ಎನ್ನುವ ಬಾಲ್ಯದ ಮಾತುಗಳ ಆಟವು ಈಗ ಸಮಾಪ್ತಿಯಾಗಿಬಿಡಲಿ. ಇದರ ಸಮಾಪ್ತಿ ಸಮಾರಂಭವನ್ನು ಈಗ ಆಚರಣೆ ಮಾಡಿರಿ. ಒಳ್ಳೆಯದು.

**(2) ನಾನು ಧರ್ಮದರ್ಶಿಯಾಗಿದ್ದೇನೆ ಎಂದು ತಿಳಿದುಕೊಳ್ಳುವುದರಿಂದ ಸಂಪೂರ್ಣ ಸ್ಥಿತಿ:**

ಎಲ್ಲರೂ ಸದಾ ನಿಮ್ಮನ್ನು ಧರ್ಮದರ್ಶಿ ಎಂದು ತಿಳಿದುಕೊಂಡು ನಡೆಯುತ್ತೀರಾ? ಧರ್ಮದರ್ಶಿ ಎಂದರೆ ಸದಾ ಹಗುರ, ಗೃಹಸ್ಥಿ ಎಂದರೆ ಸದಾ ಹೊರೆ ಹೊತ್ತುಕೊಂಡಿರುವವರು. ಗೃಹಸ್ಥರಾದರೆ ಕ್ಷೀಣಿಸುವ ಕಲೆಯಲ್ಲಿ ಹೋಗುವಿರಿ. ಧರ್ಮದರ್ಶಿ ಆದರೆ ವೃದ್ಧಿ ಕಲೆಯಲ್ಲಿ ಹೋಗುವಿರಿ. ಧರ್ಮದರ್ಶಿಯು ಸದಾ ನಿಶ್ಚಿಂತ ಆದ ಚಕ್ರವರ್ತಿ ಆಗಿರುತ್ತಾನೆ. ಎಂದರೆ ಚಿಂತೆಯಿಂದ ಬಿಡುಗಡೆ ಆಗಿರುತ್ತಾನೆ. ಅವರಿಗೆ ನಾನು ಮಾಸ್ಟರ್ ಸರ್ವಶಕ್ತಿವಂತ ಆಗಿದ್ದೇನೆ ಎನ್ನುವ ಅಭಿಮಾನ ಇರುತ್ತದೆ. ಎಂತಹ ಪರಿಸ್ಥಿತಿಯೇ ಇರಲಿ ಸ್ವಯಂ ತಾವು ಹಗುರ ಆಗಿರುವರು. ಸ್ವಯಂ ಸದಾ ಅತೀತ ಆಗಿರುವರು. ಸ್ವಲ್ಪವೂ ವಾತಾವರಣದ ಪ್ರಭಾವದಲ್ಲಿ ಬರುವುದಿಲ್ಲ. ಗೃಹಸ್ಥಿ ಎಂದು ತಿಳಿದುಕೊಂಡರೆ ಏನು, ಏಕೆ ಎನ್ನುವ ಪ್ರಶ್ನೆಗಳು ಪ್ರಾರಂಭವಾಗಿಬಿಡುತ್ತವೆ. ಧರ್ಮದರ್ಶಿ ಎಂದು ತಿಳಿದುಕೊಂಡರೆ ಪೂರ್ಣ ವಿರಾಮ ಬಿದ್ದುಬಿಡುತ್ತದೆ. ಪೂರ್ಣ ವಿರಾಮ ಎಂದರೆ ಶಕ್ತಿಪೂರ್ಣ ಸ್ಥಿತಿಯ ಅನುಭವ ಆಗುತ್ತದೆ.

**(3) ಅಂಗದನ ಸಮಾನ ಅಚಲ ಸ್ಥಿತಿಯನ್ನು ರೂಪಿಸಿಕೊಳ್ಳುವ ಸಲುವಾಗಿ ನಿಶ್ಚಯದ ತಳಹದಿಯನ್ನು ಭದ್ರಮಾಡಿಕೊಳ್ಳಿರಿ :**

ಎಲ್ಲರೂ ಅಂಗದನ ಸಮಾನ ಅಚಲ ಆಗಿದ್ದೀರಾ? ಮಾಯೆಯ ಯಾವುದೇ ಪ್ರಕಾರ ಗಡಿಬಿಡಿಯಲ್ಲಿ ನೀವು ಅಚಲ ಆಗಿರುತ್ತೀರಾ? ಮಾಯೆಯ ಯಾವುದೇ ಧಾಳಿಯು ಸ್ಥಿತಿಯನ್ನು ಅಲುಗಾಡಿಸಲು ಸಾಧ್ಯವಾಗಬಾರದು. ಅಲುಗಾಡುವ ಕಾರಣ ಏನು? ನಿಶ್ಚಯದ ಆಸ್ತಿಭಾರವು ಭದ್ರವಾಗಿಲ್ಲದಿರುವ ಕಾರಣವೇ ಅಲುಗಾಡುತ್ತೀರಿ. ಇದು ಕಲ್ಯಾಣಕಾರಿ ಸಮಯವೂ ಆಗಿದೆ, ಪ್ರತಿಯೊಂದು ಘಟನೆಯಲ್ಲಿಯೂ ಕಲ್ಯಾಣ ಇದೆ ಎನ್ನುವ ನಿಶ್ಚಯ ಇದ್ದರೆ ಆಗ ಎಷ್ಟೇ ಬಿರುಗಾಳಿಗಳು ಬಂದರೂ ಅವು ನಿಮ್ಮನ್ನು ಅಲುಗಾಡಿಸಲು ಸಾಧ್ಯವಾಗುವುದಿಲ್ಲ. ಈಗ ನಿಶ್ಚಯದ ತಳಹದಿಯಲ್ಲಿ ತೀವ್ರ ಪುರುಷಾರ್ಥದ ನೀರನ್ನು ಎರೆದು ಸುಭದ್ರ ಮಾಡಿರಿ. ಆಗ ಸದಾ ಅಂಗದನ ಸಮಾನ ಇರುವಿರಿ. ಮಾಯೆಯ ಧಾಳಿಯನ್ನು ಆಕ್ರಮಣ ಎಂದು ತಿಳಿಯುವುದಿಲ್ಲ. ಈಗ ಅಲುಗಾಡುವ ಸಮಯ ಕಳೆದುಹೋಯಿತು. ಒಂದುವೇಳೆ ಈಗಲೂ ಸಹ ಅಲುಗಾಡುತ್ತಾ ಇದ್ದರೆ ಅಂತಿಮ ಪರೀಕ್ಷೆಯಲ್ಲಿಯೂ ಅಲುಗಾಡಿಬಿಡುವಿರಿ. ಆಗ ಜನ್ಮಜನ್ಮಾಂತರದ ವರೆಗೆ ನಾಪಾಸಾಗಿಬಿಡುವಿರಿ. ಆದ್ದರಿಂದ ಸ್ಮೃತಿಯ ಸಂಸ್ಕಾರವನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿರಿ. ಅಂಗದನ ದೃಷ್ಟಾಂತವು ನಮ್ಮ ಜ್ಞಾಪಕಾರ್ಥವಾಗಿ ಇದೆ ಎನ್ನುವುದನ್ನು ಸದಾ ನೆನಪಿಟ್ಟುಕೊಳ್ಳಿರಿ. ಆಗ ಶಕ್ತಿಯು ತುಂಬುವುದು.

(4) **ಧೈರ್ಯ ಮತ್ತು ಉಲ್ಲಾಸವನ್ನು ಏಕರಸವಾಗಿ ಮಾಡಿಕೊಳ್ಳುವ ಸಲುವಾಗಿ ಏಕರಸ ಸ್ಥಿತಿ:** ಸದಾ ಧೈರ್ಯ ಹಾಗೂ ಉಲ್ಲಾಸವು ಏಕರಸವಾಗಿರುತ್ತದೆಯೇ. ಯಾವಾಗ ಏಕರಸ ಸ್ಥಿತಿ ಇರುವುದೋ ಆಗ ಸಾಹಸ ಹಾಗೂ ಉಲ್ಲಾಸವೂ ಸಹ ಸದಾ ಏಕರಸವಾಗಿ ಇರುವುದು, ಏರುಪೇರಾಗುವುದಿಲ್ಲ. ಒಮ್ಮೊಮ್ಮೆ ಹೆಚ್ಚು ಒಮ್ಮೊಮ್ಮೆ ಕಡಿಮೆ ಆಗಿರುವ ಕಾರಣ ಏನು? ಸರ್ವಪ್ರಾಪ್ತಿಗಳ ಅನುಭವವು ಸದಾ ಮುಂದೆ ಅಥವಾ ಸ್ಮೃತಿಯಲ್ಲಿ ಇರುವುದಿಲ್ಲ. ಇಂದು ಅಲ್ಪಕಾಲದ ಪ್ರಾಪ್ತಿಯೂ ಸಹ ಧೈರ್ಯ ಹಾಗೂ ಉಲ್ಲಾಸದಲ್ಲಿ ತರುತ್ತದೆ. ಆದರೆ ಇದು ಸದಾಕಾಲ ಹಾಗೂ ಸರ್ವ ಪ್ರಾಪ್ತಿ ಆಗಿದೆ. ಇದರ ಪರಿಣಾಮ ಏನಾಗುವುದು? ತಂದೆಯ ಮೂಲಕ ಜನ್ಮ ತೆಗೆದುಕೊಂಡಾಗಿನಿಂದಲೇ ಏನು ಪ್ರಾಪ್ತಿ ಆಗಿದೆಯೋ ಅದೆಲ್ಲದರ ಪಟ್ಟಿಯನ್ನು ಮುಂದೆ ಇಟ್ಟುಕೊಳ್ಳಿರಿ. ಯಾವಾಗ ಪ್ರಾಪ್ತಿಯು ಅಚಲ, ಅಟಲ ಅಗಿದೆಯೋ ಆಗ ಧೈರ್ಯ ಹಾಗೂ ಉಲ್ಲಾಸವೂ ಸಹ ಅಚಲ ಆಗಿರಬೇಕು. ಅಚಲ ಆಗಿರುವಕ್ಕೆ ಬದಲಾಗಿ ಒಮ್ಮೊಮ್ಮೆ ಮನಸ್ಸು ಚಂಚಲ ಆಗಿಬಿಡುತ್ತದೆ ಅಥವಾ ಸ್ಥಿತಿಯು ಚಂಚಲತೆಯಲ್ಲಿ ಬಂದುಬಿಡುತ್ತದೆ. ಈ ಚಂಚಲತೆಯ ಸಂಸ್ಕಾರವು ಯಾರಲ್ಲಿ ಇರುತ್ತದೆ? ಈಗ ವಿಶ್ವದಲ್ಲಿ ನೀವು ಆತ್ಮರು ಎಲ್ಲರಿಗಿಂತಲೂ ವಯಸ್ಕರಾಗಿದ್ದೀರಿ, ಅನುಭವಿ ಆಗಿದ್ದೀರಿ. ಮತ್ತೆ ಚಂಚಲತೆಯು ಏಕೆ ಇರಬೇಕು? ಸದಾ ತಂದೆ ಹಾಗೂ ಪ್ರಾಪ್ತಿಯನ್ನು ಮುಂದೆ ಇಟ್ಟುಕೊಂಡರೆ ಅಚಲ ಎಂದರೆ ಏಕರಸ ಆಗಿಬಿಡುವಿರಿ. ಎಲ್ಲಾ ವಿಘ್ನಗಳೂ ಕೊನೆ ಆಗಿಬಿಡುವವು. ಜನ್ಮ ತೆಗೆದುಕೊಂಡಾಗಿನಿಂದಲೇ ವಿಜಯದ ತಿಲಕವು ಧರಿಸಿದೆ. ಆದರೆ ಅದು ಅಳಿಸಿಹೋಗದಿರುವಂತೆ ಗಮನ ಇಡುವುದಷ್ಟೇ ಮಾಡಬೇಕಾಗಿದೆ. ಸದಾ ಹೊಸ ಉತ್ಸಾಹ ಹೊಸ ಉಲ್ಲಾಸ ಹಾಗೂ ಹೊಸ ಯೋಜನೆ ಇರಬೇಕು. ಅಂತಹ ಯಾವುದಾದರೂ ಸೇವೆಯ ಸಾಧನವನ್ನು ತಯಾರಿಸಿರಿ. ಅದರಿಂದ ಕಡಿಮೆ ಖರ್ಚು ಹಾಗೂ ಸಫಲತೆಯು ಹೆಚ್ಚು ಆಗಬೇಕು. ಈಗ ಸೇವೆಯ ಅವಕಾಶವು ತುಂಬಾ ಇದೆ. ಅದನ್ನು ಪೂರ್ತಿಮಾಡಿರಿ. ಪ್ರತಿಯೊಂದು ಕಾರ್ಯಕ್ರಮದಲ್ಲಿ ವಿಶೇಷತೆ ಅಥವಾ ನವೀನತೆಯು ಅವಶ್ಯವಾಗಿ ಇರಲಿ. ಎಲ್ಲರಿಗೂ ಅನುಭವವನ್ನು ಮಾಡಿಸುವ ಯೋಜನೆಯನ್ನು ತಯಾರಿಸಿರಿ. ಒಳ್ಳೆಯದು.

**ಶಿಕ್ಷಕರೊಂದಿಗೆ**: ಶಿಕ್ಷಕರಂತು ತಂದೆಯ ಸಮಾನ ಆಗಿದ್ದೀರಲ್ಲವೇ. ಹೇಗೆ ತಂದೆಯು ಶಿಕ್ಷಕ ಆಗಿದ್ದೇನೋ ಹಾಗೆಯೇ ನೀವೂ ಸಹ ಶಿಕ್ಷಕರಾದರೆ ಸಮಾನತೆ ಆಗಿಬಿಡುತ್ತದೆ. ಅಲ್ಲವೇ. ಆದ್ದರಿಂದ ಸಮಾನ ಆದವರನ್ನು ಏನೆಂದು ಕರೆಯಲಾಗುತ್ತದೆ? ಸ್ನೇಹಿತ. ಶಿಕ್ಷಕರೂ ಸಹ ಬಾಪ್ ದಾದಾರವರ ಸ್ನೇಹಿತರಾಗಿದ್ದೀರಿ. ಸ್ನೇಹಿತ ಸಂಬಂಧವೂ ಸಹ ನೆನಪಿದ್ದರೆ ಸಹಜಯೋಗಿ ಆಗಿಬಿಡುವಿರಿ. ಸ್ನೇಹಿತರ ಸಂಬಂಧವು ತುಂಬಾ ಸಮೀಪದ ಸಂಬಂಧ ಆಗಿದೆ. ಸ್ನೇಹಿತರು ಒಬ್ಬರಿಗೊಬ್ಬರು ಎಷ್ಟು ಸ್ಪಷ್ಟ ಆಗಿರುತ್ತಾರೋ ಅಷ್ಟು ತಾಯಿತಂದೆಯೊಂದಿಗೆ ಸ್ಪಷ್ಟ ಆಗಿರುವುದಿಲ್ಲ. ಸ್ನೇಹಿತನ ಸಂಬಂಧವು ನೆನಪಿದ್ದರೆ ನಿನ್ನೊಂದಿಗೇ ಊಟಮಾಡುತ್ತೇನೆ, ನಿನ್ನೊಂದಿಗೇ ಆಟವಾಡುತ್ತೇನೆ, ನಿನ್ನೊಂದಿಗೇ ಕುಳಿತುಕೊಳ್ಳುತ್ತೇನೆ ಎನ್ನುವ ಅಭ್ಯಾಸವು ಸಹಜ ಆಗಿಬಿಡುವುದು. ಎಲ್ಲಾ ಸ್ನೇಹಿತರಿಗೂ ಶುಭಾಶಯಗಳು, ಪಂಜಾಬ್ ಹಾಗೂ ದಿಲ್ಲಿಯ ಶಿಕ್ಷಕರೂ ಇದ್ದೀರಿ. ಪರಸ್ಪರ ಸೋದರ ಸೋದರಿ ಆಗಿಬಿಟ್ಟರಿ. ದೆಹಲಿಯು ಸೋದರ ಪಂಜಾಬ್ ಸೋದರಿ ಆಗಿದೆ. ಪಂಜಾಬೂ ಸಹ ದೆಹಲಿಯಿಂದ ರಚನೆಯಾಯಿತಲ್ಲವೇ. ಓಂ ಶಾಂತಿ.

ರಿವೈಸ್ ಕೋರ್ಸ್ /ಅವ್ಯಕ್ತ ಮುರಳಿ 21-12-1978.

***ಪ್ರತಿ ಕಲ್ಪದ ಅತಿ ಸಮೀಪ ಆತ್ಮರ ರೂಪ, ರೇಖೆ ಮತ್ತು ವೇಳೆ.***

ಪ್ರತಿಯೊಂದು ಮಗುವಿನ ದಿವ್ಯ ಜನ್ಮದ ರೂಪ, ರೇಖೆ, ವೇಳೆಯ ಮೇಲೆ ಸಂಗಮಯುಗ ಮತ್ತು ಭವಿಷ್ಯದ ಜೀವನ ಅವಲಂಬಿತವಾಗಿರುತ್ತದೆ. ರೂಪ: ಮಕ್ಕಳಲ್ಲಿ ಜನ್ಮದಿಂದಲೇ ಶಕ್ತಿರೂಪದ ಹೊಳಪು ಇದೆಯೇ ಅರ್ಥಾತ್ ಬಹಳ ಬಾಯಾರಿಕೆಯಿಂದ ಇರುವ ರೂಪ ಇದೆಯೇ ಮತ್ತು ಸೇವಾಧಾರಿ ಸ್ವರೂಪ ಇದೆಯೇ, ಬರುತ್ತಲೇ ಅತೀಂದ್ರಿಯ ಸುಖದ ರೂಪ ಇದೆಯೇ, ವಿಯೋಗದಿಂದ ಯೋಗದ ರೇಖೆ ಇದೆಯೇ, ಜನ್ಮಿಸಿದ ನಂತರವೇ ಸಹಯೋಗದಿಂದ ನಡೆಯುವ ರೇಖೆ ಇದೆಯೇ, ವೇಳೆ: ಕ್ಷಣದಲ್ಲಿ ನಿಶ್ಚಯ ಬುದ್ಧಿಯವರಾಗಿರುವಿರಾ, ಒಂದು ಕ್ಷಣದಲ್ಲಿ ನಿಶ್ಚಯ ಅರ್ಥಾತ್ ದೃಷ್ಟಿಯಿಂದ ಅದ್ಭುತ ಮಾಡುವವರಾಗಿದ್ದೀರಾ, ಅಥವಾ ನಿಶ್ಚಯ ಮತ್ತು ಸಂಶಯದ ಯುದ್ಧ ನಡೆಯುತ್ತಿದೆಯೇ,ಎಂದು ನೋಡುತ್ತಿದ್ದರು. ಮತ್ತು ಕಲ್ಪಪೂರ್ವದ ಭಾಗ್ಯದ ಸ್ಪರ್ಶಜ್ಞಾನದ(ಟಚಿಂಗ್) ಆಧಾರದಿಂದ ಜನ್ಮದಿಂದಲೇ ಬ್ರಾಹ್ಮಣರಾಗಿ ಇರುತ್ತಾರೆ. ನಾವು ಬ್ರಾಹ್ಮಣರೇ, ಹಿಂದೆಯೂ ಇದ್ದೆವು, ಈಗಲೂ ಇದ್ದೇವೆ, ಜನ್ಮದಿಂದಲೇ ಶಾಂತಿ, ಸುಖ ಮತ್ತು ಶಕ್ತಿಯ ರೂಪ, ಜನ್ಮದಿಂದಲೇ ಎಲ್ಲಾ ಆಸ್ತಿಯ ಅಧಿಕಾರಿಯಾಗಿ, ಬರುತ್ತಲೇ ಸರ್ವಸ್ವರೂಪಗಳ ಪ್ರಾಪ್ತಿಯ ಕಜಾನೆಗಳನ್ನು ಅನುಭವ ಮಾಡಿಕೊಳ್ಳುತ್ತಾರೆ. ಸ್ಮೃತಿಯಲ್ಲಿ ಸದಾ ವಿಜಯದ ತಿಲಕವನ್ನು ಇಟ್ಟುಕೊಂಡಿರುತ್ತಾರೆ, ಜನ್ಮದಿಂದಲೇ ಸೇವೆಯ ಜವಾಬ್ದಾರಿ ಕಿರೀಟವನ್ನು ಧರಿಸಿರುತ್ತಾರೆ, ಸದಾ ಸ್ಮೃತಿ ಮತ್ತು ಸಂತೋಷವೆಂಬ ಉಯ್ಯಾಲೆಯಲ್ಲಿ ತೂಗುತ್ತಾ ಜೀವನವನ್ನು ಕಳೆಯುವವರಾಗಿರುತ್ತಾರೆ. ತಮ್ಮ ದಿನಚರಿಯ ಸರ್ವ ಸಂಬಂಧಗಳಲ್ಲಿ ಸಮೀಪವಾಗಿ ಮತ್ತು ಸಾಕಾರ ರೂಪದಲ್ಲಿ ಜೊತೆಯನ್ನು ಅನುಭವ ಮಾಡಿಕೊಳ್ಳುತ್ತಾರೆ. ಇದು ಪ್ರತಿಕಲ್ಪದ ಅತಿ ಸಮೀಪ ಆತ್ಮರ ರೂಪ, ರೇಖೆ ಮತ್ತು ವೇಳೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಜನ್ಮದಿಂದಲೇ ಶಕ್ತಿರೂಪದ ಹೊಳಪು, ಯೋಗದ ರೇಖೆ, ಸೇವಾಧಾರಿ ಸ್ವರೂಪ, ಅತೀಂದ್ರಿಯ ಸುಖದ ರೂಪವನ್ನು ಪಡೆದಿರುವ ಮೊದಲ ನಂಬರ್ ಮಗು.

2. ನಾನು ಒಂದು ಕ್ಷಣದಲ್ಲಿ ನಿಶ್ಚಯ ಬುದ್ಧಿ, ದೃಷ್ಟಿಯಿಂದ ಅದ್ಭುತ ಮಾಡಿದ್ದೇನೆ.

3. ನಾನು ಮರುಜೀವಾ ಜೀವನದಲ್ಲಿ ಸದಾ ನಿರ್ವಿಘ್ನವಾಗಿ, ತೀವ್ರ ಪುರುಷಾರ್ಥದಿಂದ ಮುಂದಕ್ಕೆ ಹೋಗಿದ್ದೇನೆ.

4. ನಾನು ಜನ್ಮದಿಂದಲೇ ಸರ್ವ ಆಸ್ತಿಗೆ(ವಾರಸತ್ವ) ಅಧಿಕಾರಿಯಾಗಿರುವ ಮೊದಲ ನಂಬರ್ ಮಗು.

5. ನಾನು ನನ್ನ ನಿಶ್ಚಯವನ್ನು ಅಖಂಡವಾಗಿಸಿಕೊಂಡು ಸ್ಮೃತಿಯಲ್ಲಿ ಸದಾ ವಿಜಯದ ತಿಲಕವನ್ನು ಇಟ್ಟುಕೊಂಡಿದ್ದೇನೆ.

6. ನಾನು ಜನ್ಮದಿಂದಲೇ ಸೇವೆಯ ಕರ್ತವ್ಯದ ಕಿರೀಟವನ್ನು ಧರಿಸಿ, ಜ್ಞಾನ ರತ್ನಗಳೊಂದಿಗೆ ಆಡುತ್ತಾ ಸ್ಮೃತಿ ಮತ್ತು ಸಂತೋಷವೆಂಬ ಉಯ್ಯಾಲೆಯಲ್ಲಿ ತೂಗಾಡುತ್ತಾ ಜೀವನವನ್ನು ಕಳೆದಿದ್ದೇನೆ.

7. ನಾನು ನನ್ನ ದಿನಚರಿಯಲ್ಲಿ ಸಾಕಾರ ರೂಪವನ್ನು ಜೊತೆಯಾಗಿ, ಸರ್ವ ಸಂಬಂಧಗಳನ್ನು ಸಮೀಪವಾಗಿ, ವರದಾನಿ ಹಸ್ತ ಸದಾ ತಲೆಯ ಮೇಲೆ ಇದ್ದ ಹಾಗೆ ಅನುಭವ ಮಾಡಿಕೊಂಡಿರುವ ಸ್ವತಃ ಮತ್ತು ಸಹಜ ಯೋಗಿ.